* ಭವ್ಯತೆ :

ಈ ಭವ್ಯತೆ ಅಥವಾ ಮಹೋನ್ನತಿ ಇದರ ಪ್ರಸ್ಥಾನಕಾರ ಲಾಂಗಿನಸ್‌ನು ಭವ್ಯತೆಗೆ ಇಂಗ್ಲೀಷಿನಲ್ಲಿ (Sublime) ಎಂದು ಕರೆಯುವರು. ಕಾವ್ಯ ಕೃತಿಗಳು ಕಲಾಕೃತಿಗಳು ತಮ್ಮಲ್ಲಿನ ಭವ್ಯತೆಯ ಗುಣಗಳಿಂದ ದೊಡ್ಡದಾಗುತ್ತವೆ. ಎಂಬ ಆಸೆಯ ಹೊಂದಿದ್ದ ಲಾಂಜಿನೆಸನು ಈ ಸಿದ್ಧಾಂತವನ್ನು ಪಾಶ್ಚಿಮಾತ್ಯ ಕಾವ್ಯ ಮೀಮಾಂಸೆಯಲ್ಲಿ ಪ್ರಚುರಗೊಳಿಸಿದನು. ಇವನಿಗಿಂತಲೂ ಪೂರ್ವದಲ್ಲಿಯೇ ಈ ಸಿದ್ಧಾಂತ ಪ್ರಚಾರದಲ್ಲಿತ್ತು. ಡಿಸಿಲಿಯಸ್ ಎಂಬ ಮೀಮಾಂಸಕನು ಇದನ್ನು ಕುರಿತು ತಿಳಿಸಿದ್ದನು. ಈ ಮೀಮಾಂಸಕನ ಹೆಸರು ಲಾಂಜಿನಸನು ತನ್ನ ಮಹೋನ್ನತಿ ಎಂಬ ಕೃತಿಯಲ್ಲಿ ಉಲ್ಲೇಖ ಮಾಡಿರುವನು. ಲಾಂಗಿನಸ್‌ನು ತನ್ನ (Sublimy) ಯನ್ನು ಕುರಿತು On the Sublime ಎನ್ನುವ ಕೃತಿಯಲ್ಲಿ ಚರ್ಚಿಸಿರುವನು.

ಎಪಿಸನ್ : ಎನ್ನುವ ಚಿಂತಕ ಕಲೆಗೆ ಎರಡು ತರನಾದ ಮುಖಗಳಿವೆ. ಅದರಂತೆ ಕಾವ್ಯ ಕೃತಿಗಳಲ್ಲೂ ಸಿಕ್ಕುವ ರಸಾನುಭೂತಿಗುಣ ೨ ಮುಖಗಳನ್ನು ಕಾಣಬಹುದಾಗಿದೆ.

---

Scanned with CamScanner

ಸೌಂದರ್ಯ
೧. ಭವ್ಯದ ಮುಖ. ಮುಖ.
೨.

## ೧. ಸೌಂದರ್ಯದ ಮುಖ :

ಸೌಂದರ್ಯ ಮತ್ತು ಭವ್ಯತೆಗಳು ನಿಜವಾಗಿಯೂ ಬೇರೆಬೇರೆ ಇರುತ್ತವೆ. ಒಂದು ಕಲೆಯನ್ನು ನೋಡುವಾಗ ಅದರ ಸೌಂದರ್ಯಾನುಭೂತಿಯು ನಮ್ಮ ಹೃದಯವನ್ನು ಮುಟ್ಟುತ್ತದೆ. ಮನಸ್ಸನ್ನು ಸ್ಪಂದಿಸುತ್ತದೆ. ಅಂತಹ ಆ ಸೌಂದರ್ಯವನ್ನು ಕುರಿತಂತೆ ವಿವರಣೆ ನೀಡಬಹುದು. ಕಂಡ ಸೌಂದರ್ಯವನ್ನು ಶಬ್ದಗಳಲ್ಲಿ ಹಿಡಿದಿಡಬಹುದು. ಅಲ್ಲಿ ಕಂಡು ಬರುವ ಓರೆ ಕೋರೆಗಳೇನಾದರು ಇದ್ದರೆ ಅವುಗಳನ್ನು ತಿದ್ದುವದಕ್ಕೂ ಹವಣಿಸಬಹುದು. ಉದಾ: ಬೇಲೂರಿನ ಶಿಲಾ ಬಾಲಿಕೆಯರ ಶಿಲ್ಪಕಲಾ ಚಿತ್ರಗಳನ್ನು ನೋಡಿದಾಗ ಆಗುವ ಸೌಂದರ್ಯಾನುಭೂತಿ ಇಂತಹ ಬಗೆಯದೆ ಆಗಿದೆ. ಅಲ್ಲಿ ನಾವು ವ್ಯಕ್ತಿತ್ವದ ಅರಿವನ್ನು ಸುವ್ಯಕ್ತಗೊಳಿಸುವದು ಸಾಧ್ಯವಿದೆ. ಜಾಣಾಕ್ಷತನವನ್ನು ನಮ್ಮ ಬುದ್ಧಿವಂತಿಕೆಯನ್ನು ತೋರುವುದಕ್ಕೆ ಅವಕಾಶವಿದೆ.

## ೨. ಭವ್ಯದ ಮೂಲ :

ಭವ್ಯತೆಯಲ್ಲಿ ಸೌಂದರ್ಯವು ಇರುತ್ತದೆ. ಭವ್ಯತೆಯನ್ನು ವ್ಯಕ್ತಗೊಳಿಸುವ ಒಂದು ವಸ್ತುವಿನ ಎದುರು ಬಂದು ನಿಂತಾಗ ಅಲ್ಲಿ ಬಾಯಿ ತೆರೆಯುವದಕ್ಕೆ ಸಾಧ್ಯವೇ ಆಗುವುದಿಲ್ಲ ಉದಾ: ತಾಜಮಹಲ ವರ್ಣಿಸಿದಂತೆ ಗೊಮ್ಮಟನ ಮೂರ್ತಿ ವರ್ಣಿಸಬಹುದೇನು ತಾಜಮಹಲ್ ವಿಷಯದಲ್ಲಿ ಸುಂದರವೆಂದು ತೃಪ್ತರಾಗಬಹುದು. ಗೊಮ್ಮಟನ ವಿಷಯದಲ್ಲಿ ? ಆದದರಿಂದಲೇ 'ಕುವೆಂಪು' ಅವರು ಗೊಮ್ಮಟನ ಸನ್ನಿಧಿಯಲ್ಲಿ ತಮಗಾದ ಭವ್ಯತೆಯನ್ನು ಕುರಿತು ಹೇಳುತ್ತಾರೆ.

"ಅರೋ ತೆಕ್ಕನ ತುಡುಕಿ ಬಾಯ್ ಮುಚ್ಚ ಹಿಡಿದಂತೆ
ಮೌನ ಭಾವದಿ ಮಾತು ಮೂರ್ಛೆ ಹೋಗುವುದಿಲ್ಲ
"ಶ್ರೀ ಗೊಮ್ಮಟೇಶನ ಭವ್ಯಸನ್ನಿದಿಯಲ್ಲಿ"

ಎಂದು ತಿಳಿಸಿರುವರು. ಹಿಮಾಲಯ ಪರ್ವತದ ಎದುರುನಿಂತು ಏನು? ಹೇಳಬಲ್ಲರಿ ಹೀಗೆಯೇ ಕವಿಗಳು ಆ ಪರ್ವತವನ್ನು ವರ್ಣಿಸಿಲ್ಲವೆಂದೇನು ಅಲ್ಲಾ ಆದರೂ ಆ ಕ್ಷಣಕ್ಕೆ ಆದರೂ ಅಂತಹ ಬ್ರಹದ್ಪಾತ್ರದೆದರು ನಿಂತಾಗ ಭವ್ಯತೆ ಘಟ್ಟನೆ ನಮ್ಮ ಮನವನ್ನು ಹಿಡಿದು ಬಿಡುವುದರಿಂದ ತುಟಿ ಅಲುಗುವುದಿಲ್ಲ ನಾಲಗೆ ಹೊರಳುವುದಿಲ್ಲ ಬುದ್ಧಿಯ ಕಾರ್ಯ ಸ್ಥಗಿತವೇಗೊಂಡಂತಾಗುತ್ತದೆ. ಸುಮ್ಮನೆ ನೋಡುತ್ತಾ ನಿಲ್ಲುವದೇ ಕೆಲಸವಾಗುತ್ತದೆ. ಸಹೃದಯನಿಗೆ ಇಂತಹ ಸಂದರ್ಭಗಳಲ್ಲಿ ಆದುದರಿಂದಲೇ ಕುವೆಂಪು ಅವರು "ಸುಮ್ಮನೆ ನೋಡ್ತಾ ಮಾತಿಲ್ಲದೆ ನೋಡಾ" ಎಂದು ಹೇಳುವರು ವ್ಯಕ್ತಿತ್ವವೇ ಅಪ್ಪಳಿಸದಂತಾಗುತ್ತದೆ. ಮಾತುಗಳು ಮೂರ್ಛೆಹೋಗುತ್ತವೆ. ಇಂತಹ ಅನುಭವ ಯಾವ ವಸ್ತುವನ್ನು ಅವಗಹನೆ ಮಾಡುವಾಗ ಪರಿಭಾವಿಸುವಾಗ ಉಂಟಾಗುವದೇ ಅಂತ ವಸ್ತುವಿನಲ್ಲಿ ಭವ್ಯತೆ ಇದೆಯೆಂದು ದುರಾಳವಾಗಿ ಹೇಳಬಹುದು.

ಸೌಂದರ್ಯ ವೆಂಬುದು ವ್ಯಕ್ತಿತ್ವದ ಪರಿಮಿತಿಗೆ ಒಳಪಟ್ಟಿದ್ದರೆ ಈ ಭವ್ಯತೆ ಎಂಬುದರ ನಿಲುವು ವ್ಯಕ್ತಿತ್ವವನ್ನು ಮೀರಿ ಬೆಳೆದು ನಿಂತಿರುತ್ತದೆ. "ಮಾತು ಮನಂಗಳಿಂದತ್ತ ಮೀರಿದಾ ಸಾತಿಶಯದ ನಿರುಪಾಧಿಕ ನಿರ್ಮಲವಾದ" ಆ ಜೋತಿರ್ಮಯವಾದ ಕಲ್ಪನೆಯೇ ಭವ್ಯತೆ ಸೌಂದರ್ಯದ ಪರಿಣಾಮವು ನಮ್ಮ ವ್ಯಕ್ತಿತ್ವದ ಪದುರುಗಳಲ್ಲಿ ನಿಧಾನವಾಗಿ ವ್ಯಾಪಿಸಿಕೊಳ್ಳುತ್ತದೆ.

ಆದರೆ ಭವ್ಯತೆಯ ಪರಿಣಾಮವು ಮಿಂಚಿನಂತೆ ಅತ್ಯಂತ ತೀಕ್ಷ ಗುಣವುಳ್ಳದ್ದಾಗಿದೆ. ಹೀಗೆ ವಿಡಿಸನ್ ಅದರ ವಿಚಾರದಿಂದ ಭವ್ಯತೆ ಮತ್ತು ಸೌಂದರ್ಯದ ಸ್ಪಷ್ಟವಾದ ಚಿತ್ರಣ ತಿಳಿದು ಬರುತ್ತದೆ.

## ಲಾಂಗಿನಸನ್ ವಿಚಾರ :

ಭವ್ಯತೆಯನ್ನು ಕುರಿತಂತೆ ಲಾಂಗಿನಸ್‌ನು ತನ್ನ ಕೃತಿಯಲ್ಲಿ ಒಂದೆಡೆಯಲ್ಲಿಯೇ ಸಮಗ್ರವಾದ ವಿವರಣೆ ನೀಡಿರುವುದಿಲ್ಲ ಅಲ್ಲಲ್ಲಿ ಬರುವ ಅವನ ವಿಚಾರಗಳು ಒಟ್ಟೊಗೂಡಿಸಿ ಭವ್ಯತೆಯ ಒಟ್ಟು ಸ್ವರೂಪವನ್ನು ತಿಳಿದುಕೊಳ್ಳಬೇಕಾಗುತ್ತದೆ.

Sublime ಗೆ ಮೂಲ ಗ್ರೀಕನಲ್ಲಿ Pericipras ಪೆರಿಹಿಪ್ರಾಸ ಎಂದು ಕರೆಯುತ್ತಾರೆ. Sublime ಎಂಬ ಮಾತು ಕನ್ನಡದಲ್ಲಿ ಉದಾತ್ತಾ, ಉಚ್ಚ, ಗಂಭೀರ, ಶ್ರೇಷ್ಠ, ಘನವಾದ, ಮಹಿಮೆವುಳ್ಳ ದೊಡ್ಡ ಭವ್ಯ ಎಂದು ಹೇಳಬಹುದಾಗಿದೆ. ಮೂಲಗ್ರೀಕ ಪದದ ಅರ್ಥ ಭವ್ಯ ಎಂದಾಗ ಉದಾತ್ತ ಉಚ್ಚ ಎಂದಾಗುತ್ತದೆ. ಉದಾತ್ತ, ಉಚ್ಚ ಮತ್ತು ಭವ್ಯತೆಗೂ, ಶಬ್ದ ಮತ್ತು ಅರ್ಥದ ದೃಷ್ಟಿಯಿಂದ ಬಹಳಷ್ಟು ವ್ಯತ್ಯಾಸ ಇದೆ.

ಲಾಂಗಿನಸ್ ತನ್ನ ಗ್ರಂಥದಲ್ಲಿ Sublimety ಯನ್ನು ಸೂತ್ರ ರೂಪದಲ್ಲಿ ಹೇಳದೆ ವಾಗ್ಮಿಗಳು ಉಕ್ತಿಗಳ ಮೂಲಕ ಉದಾಹರಣೆಗಳೊಂದಿಗೆ ಸ್ಪಷ್ಟಿ ಕರಿಸುತ್ತಾನೆ. ಅವನ ವಿಚಾರಗಳನ್ನು ಈ ಕೆಳಗಿನಂತೆ ನೋಡಬಹುದು. ಮಹೋನ್ನತಿಯೆಂಬುದು ಭಾಷೆಯಲ್ಲಿ ಸಾಧಿಸಲಾಗುವ ಔನ್ನತ್ಯ ಹಾಗೂ ಉತ್ಕೃಷ್ಟತೆ ಪರಮ ಶ್ರೇಷ್ಠರಾದ ಕವಿಗಳಿಗೂ ಗದ್ಯಕಾರರು ಅಗ್ರಸ್ಥಾನವನ್ನು ಪಡೆದರು. ತಮ್ಮ ಕೀರ್ತಿಯನ್ನು ಚಿರಂತನಗೊಳಿಸಿದರು ಇದು ಮೂಲಕವಾಗಿಯೇ ನೈಜವಾದ ಭಾವನೆಯ ಆವೇಶದ ಹಾಗೆ

Scanned with CamScanner

ಸುನಿಶ್ಚಿತವಾಗಿ ಬೇರೆಯಾದುದು ವಾಗ್ವೈಖರಿಯು ಉನ್ನತಿಗೆರಲಾರದು. ಯೋಗ್ಯ ಸಂದರ್ಭದಲ್ಲಿ ಹೊರಹೊಮ್ಮುವ ಈ ಭಾವಾವೇಶವು ದೈವಿ ಉನ್ಮಾದದಿಂದ ದುಮುಕಿ ಬರುವ ಕೊಟ್ಟ ಸ್ವತ ನುಡಿಗಳನ್ನೇ ಆವೇಶ ಪೂರ್ಣಗೊಳಿಸುವದು.

"ಯಾವುದು ಕೇಳಿದಷ್ಟು ಸಲವೂ ಹೊಸ ಹೊಸ ಚಿಂತನಗಳಿಗೆ ಆಹಾರವೊದಗಿಸಬಲ್ಲದೋ ಯಾವುದನ್ನು ಕೇಳಿದಾಗ ಉಂಟಾಗುವ ಪರಿಣಾಮದ ತೀಕ್ಷ್ಣತೆಯನ್ನು ನಿರೂಪಿಸುವದು ಅಸಾಧ್ಯವೋ ಯಾವುದರ ನೆನಪು ಎಂದೆಂದೂ ಮಾಸಿ ಹೋಗದಷ್ಟು ಗಟ್ಟಿ ಮುಟ್ಟಾದುದೋ ಅದು ನಿಜವಾದ ಮಹೋನ್ನತಿ".

ಎಲ್ಲಾ ಕಾಲದಲ್ಲಿಯೂ ಎಲ್ಲಾ ಜನರನ್ನು ಯಾವುದು ಮೆಚ್ಚಿಸಲಬಲ್ಲದೋ ಅದು ಮಹೋನ್ನತಿಯ ನೈಜ ಸುಂದರ ಪರಿಣಾಮ ಮಹೋನ್ನತಿಯಾದರೂ ಯೊಗ್ಯ ಸಂದರ್ಭದಲ್ಲಿ ಹೊರ ಹೊಮ್ಮಿತೆಂದರೆ ವಿಷಯದ ನಿಗೂಢತೆಯಲ್ಲಿ ತುಂಡು ತುಂಡಾಗಿ ವಿರಳ ವಿರಳವಾಗಿ ವಿಭಜಿಸಿ ಹಾಕಿ ಕೊಲ್ಮಿರಸದಂತೆ ಒಂದೇ ಒಂದು ಸೆಳಕಿನಲ್ಲಿ ವಾಗ್ಮಿಯ ಸಮಗ್ರ ಸತ್ವವನ್ನು ಅನುಭವ ವೇದ್ಯಗೊಳಿಸುತ್ತದೆ.

ಭವ್ಯತೆ ಭಾಷೆಯ ಮಹೋನ್ನತಿಯಲ್ಲಿ ಮತ್ತು ಅರ್ತಿಯಲ್ಲಿದೆ ಅಂತಹ ಮಹೋನ್ನತಿ ಕಾವ್ಯಭಾಗವು ಓದುಗನನ್ನು ಕೇವಲ ಸಮಾಧಾನಗೊಳಿಸುವದಿಲ್ಲ ಅವನನ್ನು ಪರಿವರ್ತಿಸುತ್ತದೆ. ನಿಜವಾದ ಭವ್ಯತೆಯಿಂದ ನಮ್ಮ ಆತ್ಮವು ಮೇಲಕ್ಕೆ ಎತ್ತಲ್ಪಟ್ಟು ಅನುಭವವಾಗುತ್ತದೆ. ಆ ಮಹೋನ್ನತಿಯಲ್ಲಿ ನಾವು ಯಾವುದು ಶ್ರವಣಗೋಚರವಾಯಿತೋ ಅದನ್ನೇ ವಾಸ್ತವಾಗಿ ಅನುಭವದಲ್ಲಿ ಪಡೆದಂತಾಗಿ ಒಂದು ಬಗೆಯ ಹೆಮ್ಮೆಯ ಹಿಗ್ಗಿನಲ್ಲಿ ನಿಲ್ಲುತ್ತದೆ.

ಈ ಭವ್ಯತೆಯ ಸ್ವರೂಪವನ್ನು ಹೇಳುವ ಅಭಿಪ್ರಾಯವನ್ನು ಒಟ್ಟಾರೆ ಇದರ ಸಾರವನ್ನು ಈ ಕೆಳಗಿನಂತೆ ಸಂಗ್ರಹಿಸಿ ಹೇಳಬಹುದಾಗಿದೆ.

೧. ಭವ್ಯತೆಯು ಭಾಷೆಯ ಒಂದು ಅಂಗ ಅದು ಭಾಷೆಯ ಮೂಲಕವಾಗಿಯೇ ಕಾವ್ಯದಲ್ಲಿ ಸಿದ್ಧಿಯಾಗುತ್ತದೆ.

೨. ಭವ್ಯತೆಯೂ ಒಂದೊಂದು ಸಲ ದೈವೀ ಉನ್ಮಾದದಿಂದಲೂ ಸಂಧಿತವಾಗುತ್ತದೆ.

೩. ಭವ್ಯತೆ ಎಂಬುದು ಮಹಾತ್ಮದ ಮಹಾಧ್ವನಿ.

೪. ಭವ್ಯತೆಯಿಂದ ಆತ್ಮದ ಬಂಧುಗಳು ಕಳಚಿಹೋಗಿ ಆತ್ಮವು ಎಚ್ಚರವಾಗುತ್ತದೆ.

೫. ಭವ್ಯತೆಯು ನವ ನವೋನ್ಮೇಶ ಶಾಲಿನಿಯಾದುದು.

೬. ಭವ್ಯತೆಯ ಅನುಭವ ಶಾಶ್ವತವಾದದ್ದು. ಸಾರ್ವಕಾಲಿಕ ಸತ್ಯದಿಂದ ಕೂಡಿದಿದ್ದು ಮತ್ತು ಎಲ್ಲಕಾಲದ ಜನರನ್ನು ತಲುಪುವ ಶಕ್ತಿಯನ್ನು ಪಡೆದುದಾಗಿದೆ.

೭. ಕೇವಲ ಕಾವ್ಯ ಕೃತಿಗಳಲ್ಲಿ ಅಷ್ಟೆ ಅಲ್ಲ ದೃಶ್ಯ ಕಲೆಗಳಲ್ಲೂ ಈ ಭವ್ಯತೆಯ ಅನುಭವ ಪಡೆಯುವದು ಸಾಧ್ಯವಿದೆ.

೮. ಭವ್ಯತೆಯ ಅನುಭವ ಮಾತುಗಳಿಗೆ ನಿಲುಕದು. ಅದು ಹೃದಯ ವೇದ್ಯವಾದದು.

೯. ಭವ್ಯತೆಯು ಓದುಗನನ್ನು ಪರಿವರ್ತನೆಗೊಳಿಸುತ್ತದೆ.

೧೦. ಭವ್ಯತೆಯು ಶಾಶ್ವತವಾದ ಆನಂದವನ್ನು ನೀಡುತ್ತದೆ.

೧೧. ಭವ್ಯತೆಯ ಪರಿಣಾಮವು ಮಿಂಚಿನಂತೆ ತೀಕ್ಷ್ಣವಾಗಿದೆ.

೧೨. ಭವ್ಯತೆಯು ಭಾಷೆಯಲ್ಲಿ ಧ್ವನಿಗೆ ಪೂರಕವಾಗುತ್ತದೆ. ಮಾತುಗಳಿಗಿರುವ ಈ ಶಕ್ತಿಯೇ ಭವ್ಯತೆಯನ್ನು ಮಾತುಗಳಿಗೆ ಮೀರಿದ ಅನುಭವದತ್ತ ಕೊಂಡೊಯ್ಯುತ್ತದೆ.

Sublimity must leave the mind more food for replecation than the words sum to convas ಎಂಬ ಮಾತು ಗಮನಾರ್ಹವಾಗಿದೆ. ಮಾತುಗಳು ಹೊರಗೆ ಕೊಡುವ ಅರ್ಥಕ್ಕಿಂತಲೂ ಹೆಚ್ಚು ಚಿಂತನ ಶೀಲತೆಯ ಸಾಮಗ್ರಿಯನ್ನು ಮನಸ್ಸಿಗೆ ಒದಗಿಸುತ್ತವೆ. ಎಲ್ಲಿ ಭವ್ಯತೆ ಇದೆಯೋ ಅಲ್ಲಿ ಧ್ವನಿ ಇದ್ದೆ ಇರುತ್ತದೆ ಎನ್ನಬಹುದು. ಭವ್ಯತೆಯಿಂದಲೇ ಧ್ವನಿ ಸಾಧಿತವಾಗುತ್ತದೆ. ಧ್ವನಿಯಿಂದ ಕಾವ್ಯವು ಭವ್ಯತೆಯ ಮಟ್ಟಕ್ಕೇರುತ್ತದೆ. ಇವು ಒಂದಕ್ಕೊಂದು ಪರಿಪೂರಕಗಳೆಂದು ಹೇಳಬಹುದು.

ಲಾಂಗಿನಸನು ಭವ್ಯತೆ ಸಾಧಿಸುವ ಐದು ಅಂಶಗಳನ್ನು ಬರವಣಿಗೆ ಮತ್ತು ವಾಕ್ ಪ್ರೌಡಿಮೆಗೆ ಸಂಬಂಧಿಸಿದಂತೆ ತಿಳಿಸಿರುವನು. ಅವನ ಐದು ಅಂಶಗಳು ಇಂತಿವೆ.

Scanned with CamScanner

೧. ಮಹೋನ್ನತ ಭಾವಗಳನ್ನು ರೂಡಿಸುವುದು.
೨. ಪ್ರಭಲವಾದ ರಾಗಗಳ ಪ್ರಬೋಧನೆ.
೩. ಗಂಭೀರವಾದ ಪದ ರಚನೆ.
೪. ಶಬ್ದ ಮತ್ತು ಅರ್ಥಾಲಂಕಾರ ಯೋಜನೆ.
೫. ಅತಿಶಯವಾದ ಬಂದ.

ಈ ಅತಿಶಯವಾದ ಬಂದವು ಕೃತಿಯ ಒಳಗಿನ ಮತ್ತು ಹೊರಗಿನ ಚೌಕಟ್ಟುಗಳೆರಡು ಸಂಬಂಧ ಪಟ್ಟುದಾಗಿದೆ. ಈ ಬಂಧವನ್ನು ನಾವು ಎರಡು ರೀತಿಯಲ್ಲಿ ಪರಿಭಾವಿಸುವ ಸಾಧ್ಯತೆ ಕಂಡು ಬರುತ್ತದೆ. ಒಂದು ಕಾವ್ಯದಲ್ಲಿನ ಪದಗಳ ಬಂದ ಇನ್ನೊಂದು ಕಾವ್ಯಕ್ಕೆ ಆವರಣದಂತಿರುವ ಛಂದೋಬಂದ ಕಾವ್ಯದಲ್ಲಿನ ಪದಗಳನ್ನು ಕುರಿತು ಹೇಳುವ ನಿರೂಪಣೆ ಆಯ್ದುಕೊಳ್ಳುತ್ತಾನೆ. ಎಷ್ಟೋ ಸಲ ರಚನೆಗೆ ತೊಡಗಿದಾಗ ಅಂತಹ ಪದಗಳು ತನ್ನ ತಾನೇ ಕವಿಯ ರಚನಾ ಕೌಶಲಕ್ಕೆ ಒದಗಿಬರುತ್ತದೆ. ಅಂತಹ ಕಾವ್ಯ ಬಂದದಲ್ಲಿನ ಒಂದು ಪದ ತೆಗೆಯುವದಕ್ಕೂ ಸಾಧ್ಯವಿರುವದಿಲ್ಲ ಒಂದು ಹೆಚ್ಚಿನ ಪದ ಸೇರಿಸುವದಕ್ಕೂ ಅಸ್ಪದವಿರುವುದಿಲ್ಲ ಆ ತೆರನಾದ ಪದ ಬಂಧವು ಪ್ರತಿಭಾವಂತ ಮಹಾಕವಿಗಳ ಕಾವ್ಯದಲ್ಲಿ ಸಂಯೋಜಿತವಾಗುತ್ತದೆ.

ಲಾಂಗಿನಸ್‌ನ ನಂತರದಲ್ಲಿ ಈ ತತ್ವವು ಮುಂದಿನ ಕಾವ್ಯ ಚಿಂತಕರಲ್ಲಿ ಮುಂದುವರಿದು ಕೊಂಡು ಬಂದಿತು. ಎಡಿಪ್‌ಸ್ ಮೊಟ್ಟ ಮೊದಲು ಬಾರಿಗೆ ಭವ್ಯ ಮತ್ತು ಸೌಂದರ್ಯ ಇವೆರೆಡು ಬೇರೆ ಬೇರೆ ಎಂಬುದನ್ನು ಚರ್ಚಿಸಿ ಸಂಬಂಧಪಡಿಸಿದನು.

ಭವ್ಯತೆಯಲ್ಲಿ ಭಯ ಮತ್ತು ಅದ್ಭುತದ ರಸಾಂಶವಿರುವುದನ್ನು ಮೀಮಾಂಸಕರು ಗುರುತಿಸುವರು. ಭವ್ಯತೆಯನ್ನು ಅನುಭವಿಸುವಾಗ ಅನುಭವಿಗೆ ಭಯ ಭಾವವು ಕಾಣಿಸಿ ಕೊಳ್ಳವದರೊಟ್ಟಿಗೆ ಅದ್ಭುತವು ಉಂಟಾಗುತ್ತದೆ ಎನ್ನುವರು. ಅವರು ಮೇಲಿನ ಮಾತಿನ ಸತ್ಯತೆಯನ್ನು ಈ ಮುಂದಿನ ಉದಾಹರಣೆಗಳಿಂದ ಅರಿಯಬಹುದು.

ಕೃಷ್ಣನು ಅರ್ಜುನನಿಗೆ ವಿಶ್ವರೂಪ ತೋರಿಸಿದ ಅನುಭವವಂತೂ ಭವ್ಯತೆಗೆ ನಿದರ್ಶನ ಎಂಬುವದನ್ನು ಪಂಡಿತರು ಗುರು, ತಿಳಿದಿರುವರು ಏಕಮುಖ ದ್ವಿಹಸ್ತವುಳ್ಳವನಾಗಿ ಸದಾ ಆತ್ಮೀಯ ಗೆಳೆಯನಂತೆ ಇರುತ್ತಿದ್ದು ಕೃಷ್ಣನು ಒಮ್ಮಲೇ ಹಲವಾರು ಮುಖಗಳು ನೂರಾರು ಬಾಹುಗಳುಳ್ಳ ವಿರಾಟರೂಪ ಧರಿಸಿ ನಿಂತಾಗ ಅದರೊಂದಿಗೆ ಅಧ್ಭುತವಾಗುವದಂತೂ ಸರ್ವಸಾಮಾನ್ಯ.

* "ಮಹೋನ್ನತಿಯ ರೂಪಗಳನ್ನು ರೂಪಿಸುವುದು"

೧. ಕೃತಿಯುಲ್ಲಿ ಭಾವಗಳು ಮುಖ್ಯವಾದವುಗಳು ಸರಳವಾದ ಕೆಳಮಟ್ಟದ ಒಂದು ಕೃತಿಯು ಎಂದೂ ಮಹೋನ್ನತಿಯಾಗುವುದಿಲ್ಲ. ಕೃತಿಯಲ್ಲಿ ಮಹೋನ್ನತವಾದ ಭಾವಗಳಿರುವಂತೆ ಅದನ್ನು ನಿರೂಪಿಸುವನಲ್ಲಿರುವ ಭಾವಗಳು ಅದಕ್ಕೆ ಸಂವೇದವಾಗಿರಬೇಕು. ಹಾಗೆ ಆ ಭಾವಗಳು ಸ್ಪಷ್ಟವಾಗಿರಬೇಕು, ಸಮ್ಮೋಹಕತೆಯಿಂದ ಕೂಡಿರಬೇಕು. ಹಾಗೂ ಮಾನಾಕರ್ಷಕವಾಗಿರಬೇಕು. ಇಂತಹ ಭಾವಗಳು ಕೃತಿಯಲ್ಲಿ ಇರುವದರಿಂದ ಭವ್ಯತೆ ತಾನೇ ತಾನಾಗಿ ಸಿದ್ಧಿಸಬಲ್ಲದು.

**೨. ಪ್ರಬಲವಾದ ರಾಗಗಳ ಪ್ರಬೋಧನೆ :**

ಸಂಗೀತವೂ ಸಹ ಶ್ರೋತೃಗಳನ್ನು ಸಮ್ಮೋಹಗೊಳಿಸಿ ಭವ್ಯತೆಯ ಮಟ್ಟಕ್ಕೆ ಕರೆದೊಯ್ಯಬಲ್ಲದು. ಸಂಗೀತಕ್ಕೆ ಅತ್ಯಂತ ಉತ್ಕೃಷ್ಟತೆ ಲಭಿಸಬೇಕಾದರೆ ಅಲ್ಲಿ ಪ್ರಭಲವಾದ ರಾಗಗಳಿರಬೇಕು ಪ್ರಭಲವಾದ ರಾಗಗಳಿಂದ ಅದ್ಭುತವಾಗುವ ಸಂಗೀತ ಕಲೆಯು ಕೇಳುಗರನ್ನು ಭವ್ಯತೆಯ ಹರಿತಕ್ಕೆ ಕರೆದೊಯ್ದು ಬ್ರಹ್ಮಾನಂದಕ್ಕೆ ಸಮವಾದ ಕಲಾನಂದವನ್ನುಂಟು ಮಾಡುತ್ತದೆ.

**೩. ಗಂಭೀರವಾದ ಪದರಚನೆ :**

ಕಾವ್ಯ ಕೃತಿಯ ಶೈಲಿಗೆ ಸಂಬಂಧಪಟ್ಟುದ್ದಾಗಿದೆ. ಎಷ್ಟೆಷ್ಟು ಶೈಲಿ. ಶ್ರೀ ಮದ್ಗಾಂಭೀರ್ಯದಿಂದ ಕೂಡಿರುವುದೋ ಅಷ್ಟರ ಮಟ್ಟಿಗೆ ಕೃತಿಯ ಔನತ್ಯವು ಮೇಲಿರುತ್ತದೆ. ಕೃತಿಯು ಮೇಲೇರಿದಷ್ಟು ಅದು ಭವ್ಯವಾಗುತ್ತದೆ. ಭವ್ಯ ಕವಿಗಳೇ ಸಾಹಿತ್ಯ ಚರಿತ್ರೆಯ ಪುಟಗಳಲ್ಲಿ ಮಹಾಕವಿಗಳೆಂದು ಉಲ್ಲೇಖಿತರಾಗಿದ್ದರು. ಆದುದರಿಂದ ಶೈಲಿಯೂ ಸಹ ಭವ್ಯತೆಯನ್ನು ಒದಗಿಸುವಲ್ಲಿ ಒಂದು ಅಂಶವೆಂದು ಲಾಂಗಿನಸ ಭಾವಿಸುವನು.

**೪. ಶಬ್ದ ಮತ್ತು ಅರ್ಥಾಲಂಕಾರ ಯೋಜನೆ :**

ಲಾಂಗಿನಸ್ ಶಬ್ದ ಮತ್ತು ಅರ್ಥಾಲಂಕಾರಗಳ ವಿಚಾರವನ್ನು ಭವ್ಯತೆಗೆ ಸಂಬಂಧಿಸಿದಂತೆ ತಿಳಿಸುವನು ಒಂದು ಕಾವ್ಯ ಕೃತಿಯುಲ್ಲಿನ ಅಲಂಕಾರಗಳು ಆ ಕಾವ್ಯ ಕನ್ನಿಕೆಯ ಸೌಂದರ್ಯವನ್ನು ಇಮ್ಮಡಿಗೊಳಿಸಲು ತೊಡಿಸಿದ ತೊಡಿಗೆಗಳೆಂಬುದು ಭಾರತೀಯ ಚಿಂತಕರು ಭಾವಿಸಿರುವರು. ಆದರೆ ಅವು ಕೃತಕವಾಗಿ ಹಾಕಿದ ಆಭರಣಗಳಲ್ಲಿ ಸಹಜ ಸೌಂದರ್ಯಕ್ಕೆ ಪೂರಕವಾದ ಆಭರಣಗಳು ಅವುಗಳಿಂದ ಕಾವ್ಯದ ಅಂತ ಸತ್ವದ ಸೌಂದರ್ಯವು ಇಮ್ಮಡಿಸಬೇಕೇ ಹೊರತು ಅದೊಂದು ಎತ್ತಲಾಗದ ಹೊರೆಯುಂತಾಗಬಾರದು. ಆದುದರಿಂದ ಪ್ರತಿಭಾ ವಂತನಾದ ಕವಿಯು ತನ್ನ ಕಾವ್ಯಕ್ಕೆ ಔಚಿತ್ಯವಾದ ಶಬ್ದ ಮತ್ತು

Scanned with CamScanner

ಅರ್ಥಾಲಂಕಾರಗಳನ್ನು ಪ್ರಯೋಗಿಸುತ್ತಾನೆ. ಮತ್ತು ಆ ಮೂಲಕ ಕಾವ್ಯದ ಸಹಜ ಸೌಂದರ್ಯವನ್ನು ವರ್ಧಿಸುವಂತೆ ಮಾಡುತ್ತಾನೆ. ಈ ಕಾವ್ಯದ ಸಹಜ ಸೌಂದರ್ಯದಿಂದಲೇ ಕಾವ್ಯ ಅಥವಾ ಕಲಾಕೃತಿಯ ಮಹೋನ್ನತವಾಗುತ್ತದೆ.

ಬೋಲಿಯೋ ·

Scanned with CamScanner